ಸೆಲೆಬ್ರಿಟಿ
■ ಹನಿ

# ಮದುಮಗಳು ಸೆರೆನಾ

ಕ್ರೀಡಾಪಟುಗಳು ಕವಿತೆ ಬರೆಯುವುದು ಕಡಿಮೆ. 22 ಬಾರಿ ಗ್ರ್ಯಾನ್ ಪ್ರಿ ಪ್ರಶಸ್ತಿ ಗೆದ್ದು ವಿಶ್ವ ಟೆನಿಸ್‌ನ 'ನಂಬರ್ ಒನ್' ಆಟಗಾರ್ತಿ ಆಗಿರುವ ಸೆರೆನಾ ವಿಲಿಯಮ್ಸ್ ಕಳೆದ ತಿಂಗಳು 'ರೆಡಿಟ್ಟ್' ನಲ್ಲಿ ಸ್ವಂತ ಕವಿತೆಯೊಂದನ್ನು ಪ್ರಕಟಿಸಿದ್ದಾರೆ. ಅದರ ಕೊನೆಯ ಸಾಲುಗಳು ಹೀಗಿದ್ದವು:

.... ಮತ್ತೆ ಈಗ ಅದೊಂದು ಪೂರ್ಣ ವರ್ತುಲ
ನಾವು ಆಕಸ್ಮಿಕವಾಗಿ ಭೇಟಿಯಾದ ಅದೇ ಟೇಬಲಲ್ಲಿ
ಆದರೆ ಈ ಸಲ ಅದು ಆಕಸ್ಮಿಕವಲ್ಲ, ಆಯ್ಕೆ
ಮೊಣಕಾಲೂರಿ ಅವನು ಆ ನಾಲ್ಕಕ್ಷರ ಉಚ್ಚರಿಸಿದ
ನಾನು ಹೂಂ ಎಂದೆ!

–ಈ ಕವಿತೆ ಪ್ರಕಟವಾದ ಬಳಿಕ ಇಡೀ ಜಗತ್ತಿಗೇ 'ಸೆರೆನಾ ಮದುವೆ ನಿಶ್ಚಯವಾಗಿದೆ' ಎನ್ನುವುದು ಗೊತ್ತಾಯಿತು!

ಈ ಕಾಲಂ ಬರೆಯುತ್ತಿರುವಾಗ ಸೆರೆನಾ ಆಸ್ಟ್ರೇಲಿಯನ್ ಓಪನ್ ಟೆನಿಸ್‌ನಲ್ಲಿ ಮಿಂಚುತ್ತಿದ್ದಾರೆ. ಒಟ್ಟು 23 ಟೆನಿಸ್ ಗ್ರ್ಯಾನ್ ಪ್ರಿ ಪ್ರಶಸ್ತಿಗಳನ್ನು ಗೆದ್ದ ಜಗತ್ತಿನ ಏಕೈಕ ಅಥ್ಲೀಟ್ ಎಂಬ ವಿಶ್ವದಾಖಲೆಯ ಹೊಸ್ತಿಲಲ್ಲಿದ್ದಾಳೆ!

ಆಟ ಆಚೆಗಿರಲಿ; ಸೆರೆನಾಳ ಮದುವೆಯ ವಿಷಯ ಮಾತನಾಡೋಣ. 35ರ ಹರೆಯದ ಸೆರೆನಾಗೆ ವಜ್ರದ ರಿಂಗ್ ತೊಡಿಸಿದಾತ ಅಲೆಕ್ಸಿಸ್ ಒಹಾನಿಯನ್. 33ರ ಹರೆಯದ ಈತ ಅಮೆರಿಕದ ಟೆಕ್ಕೀ ಉದ್ಯಮಿ ಮತ್ತು ಅಮೆರಿಕದ 'ಬೆಸ್ಟ್ ಸೆಲ್ಲರ್' ಪಟ್ಟಿಯಲ್ಲಿರುವ ಲೇಖಕ. ಸಾಮಾಜಿಕ ಸುದ್ದಿಗಳ ವೆಬ್‌ಸೈಟ್ 'ರೆಡಿಟ್ಟ್' ಕಂಪೆನಿಯ ಸಹಮಾಲಕ. ಗೆಳೆಯ ಸ್ಟೀವ್ ಹಾಫ್‌ಮನ್ ಜತೆ ಸೇರಿ ಈ ವೆಬ್‌ಸೈಟ್‌ಅನ್ನು ಅಲೆಕ್ಸಿಸ್ ಸ್ಥಾಪಿಸಿದಾಗ ಆತನ ವಯಸ್ಸು ಕೇವಲ 22. ಈಗ 4070 ಲಕ್ಷ ಪೌಂಡ್ ಆಸ್ತಿಮೌಲ್ಯದ ಈ ಕಂಪೆನಿ ಅಮೆರಿಕದಲ್ಲೇ 7ನೇ ಅತಿದೊಡ್ಡ ವೆಬ್‌ಸೈಟ್ ಎಂದು ಹೆಸರು ಪಡೆದಿದೆ.

ಸೆರೆನಾ ಜತೆಗೆ ಎರಡು ವರ್ಷಗಳ ಗೆಳೆತನ ಅಲೆಕ್ಸಿಸ್‌ಗೆ ಈಗ ಮದುವೆಭಾಗ್ಯ ತಂದುಕೊಟ್ಟಿದೆ. ಸೆರೆನಾ ಪದ್ಯ ಪ್ರಕಟಿಸಿದ ಬೆನ್ನಲ್ಲೇ ಅಲೆಕ್ಸಿಸ್ ಸಂತೋಷದಿಂದ 'ಆಕೆ ಒಪ್ಪಿಕೊಂಡಳು' ಎಂದು ಮೇಲ್ ಹಾಕಿದ್ದ! ಸೆರೆನಾ ಇಂಗಿತದ ಪ್ರಕಾರ, ಫೆಬ್ರುವರಿ ಬಳಿಕ ಮದುವೆಯ ದಿನ ಫಿಕ್ಸ್ ಆಗಬಹುದು.

ಸೆರೆನಾಳ ಬಾಯ್‌ಫ್ರೆಂಡ್‌ಗಳ ಪಟ್ಟಿ ದೊಡ್ಡದೇ ಇದೆ. 2007ರಲ್ಲಿ ಅಮೆರಿಕದ ನಟ, ನಿರ್ಮಾಪಕ, ನಿರ್ದೇಶಕ, ಸಂಗೀತಗಾರ ಜಾಕಿ ಲಾಂಗ್ ಜತೆಗೆ ಸೆರೆನಾಳ ಗೆಳೆತನ ದೊಡ್ಡ ಸುದ್ದಿಯಾಗಿತ್ತು. ಆದರೆ ಎರಡು ವರ್ಷಗಳ ಬಳಿಕ, ಇನ್ನೊಬ್ಬ ನಟ ಹೊಸೀ ಸಾಂಚೆಜ್ ಜತೆ ಡೇಟಿಂಗ್ ಶುರುವಾಯಿತು. ಅದೂ ಎರಡು ವರ್ಷಗಳಷ್ಟೇ ಬಾಳಿಕೆ ಬಂತು. ಬಾಸ್ಕೆಟ್‌ಬಾಲ್ ಸೂಪರ್‌ಸ್ಟಾರ್ ಅಮರೆ ಸ್ಟ್ಯಾಡಮಿರ್ ಆ ಸ್ಥಳವನ್ನು ಆಕ್ರಮಿಸಿಕೊಂಡ. ಆ ಬಳಿಕ ಪಟ್ಟಿಯಲ್ಲಿ ಕಾಣಿಸಿಕೊಂಡಾತ ಫ್ರೆಂಚ್ ಟೆನಿಸ್ ಕೋಚ್ ಪ್ಯಾಟ್ರಿಕ್ ಮೋರ್ಟಗ್ಲೊ. ಈಗ ಆತನ ಸರದಿಯೂ ಮುಗಿದಿದೆ. ಎರಡು ವರ್ಷಗಳಿಂದ ಸೆರೆನಾ ಜತೆಗೆ ಡೇಟಿಂಗ್ ಮಾಡುತ್ತಿದ್ದ ಅಲೆಕ್ಸಿಸ್ ಮದುವೆಯ ರಿಂಗ್‌ಅನ್ನೇ ತೊಡಿಸಿದ್ದಾನೆ.

ಖ್ಯಾತಿ ಮತ್ತು ಹಣ ಎರಡೂ ಪದತಲದಲ್ಲಿ ಬಿದ್ದಿರುವ ಸೆರೆನಾಳ ಕೈಹಿಡಿಯಲು ದೊಡ್ಡ ಶ್ರೀಮಂತನೇ ಆಗಬೇಕೆಂದಿಲ್ಲ. ಏಕೆಂದರೆ ಸೆರೆನಾ ದುಡಿದು ಗುಡ್ಡೆ ಹಾಕಿರುವ ಹಣದ ಅಲ್ಪಾಂಶವನ್ನೂ ಅಲೆಕ್ಸಿಸ್ ದುಡಿದಿಲ್ಲ. (ಆತನ ಒಟ್ಟು ಆಸ್ತಿ ಮೊತ್ತ 40 ಲಕ್ಷ ಡಾಲರ್ ಅಷ್ಟೆ.) ಸೆರೆನಾಳ ಆಸ್ತಿ ಮೌಲ್ಯ 'ಫೋರ್ಬ್ಸ್' ಮಾಹಿತಿಯ ಪ್ರಕಾರ, 1500 ಲಕ್ಷ ಡಾಲರ್! ಅದರಲ್ಲಿ ಟೆನಿಸ್ ಆಡಿ ಗೆದ್ದ ಬಹುಮಾನದ ಮೊತ್ತವೇ 770 ಲಕ್ಷ ಡಾಲರ್‌ನಷ್ಟಿದೆ. 2004ರಿಂದ ನೈಕ್ ಕಂಪೆನಿ ಆಕೆಗೆ ಪ್ರಾಯೋಜಕತ್ವ ನೀಡಿದೆ. ಐದು ವರ್ಷಗಳ ಮೊದಲ ಒಪ್ಪಂದಕ್ಕೆ ಆಕೆ ಸಹಿ ಹಾಕಿದ್ದು 400 ಲಕ್ಷ ಡಾಲರ್‌ಗೆ. ಅದರ ಜತೆಗೆ ಬೋನಸ್, ಮಾರಾಟದ ಮೇಲಿನ ರಾಯಲ್ಟಿ ಬೇರೆ. ಆ ಬಳಿಕ ಒಪ್ಪಂದ ನವೀಕರಣವಾದಾಗ ಬಹುಲಾಭದಾಯಕ ಷರತ್ತುಗಳಿದ್ದವು. ಇದರ ಜತೆಗೆ ಜಗತ್ತಿನ ಪ್ರತಿಷ್ಠಿತ ಬಹುರಾಷ್ಟ್ರೀಯ ಬ್ರ್ಯಾಂಡ್‌ಗಳ ರಾಯಭಾರಿತ್ವ ಬೇರೆ. ಡೆಲ್ಟಾ, ಪೆಪ್ಸಿ, ಐಬಿಎಂ, ಬೀಟ್ಸ್, ಬುರೇಲಿ ಬ್ರಾ– ಹೀಗೆ ಹಲವಾರು ಪ್ರತಿಷ್ಠಿತ ಕಂಪೆನಿಗಳ ಜಾಹೀರಾತು ರಾಯಭಾರಿ ಸೆರೆನಾ. 2016 ರಲ್ಲಿ ಒಂದೇ ವರ್ಷ ಸೆರೆನಾ 290 ಲಕ್ಷ ಡಾಲರ್ ಹಣ ದುಡಿದಿದ್ದಾಳೆ. ಜಗತ್ತಿನ ಅತ್ಯಧಿಕ ಗಳಿಕೆಯ ಅಥ್ಲೀಟ್‌ಗಳ ಪಟ್ಟಿಯಲ್ಲಿ ಸೆರೆನಾಳದ್ದು 40ನೇ ಸ್ಥಾನ. ಆಕೆ ಮದುವೆ ಸುದ್ದಿ ಅಭಿಮಾನಿಗಳಿಗೆ ಖುಷಿಯಾಗಿದೆ. ಸಾಕಷ್ಟು ಮಂದಿ ನಿರಾಶೆ, ಸಿಟ್ಟು ಕೂಡಾ ವ್ಯಕ್ತಪಡಿಸಿದ್ದಾರೆ. 'ಕರಿಯರ ಕಣ್ಮಣಿ ಈಕೆ. ಹೋಗಿ ಹೋಗಿ ಬಿಳಿಯನನ್ನು ಮದುವೆ ಆಗುತ್ತಿದ್ದಾಳಲ್ಲ? ಕರಿಯರಲ್ಲಿ ಯಾರೂ ಸಿಗಲಿಲ್ಲವೆ?' ಎಂದು ಕೆಲವರು ಸಿಟ್ಟು ಕಾರಿಕೊಂಡಿದ್ದಾರೆ. ಹಾಗೆಂದು ಬಣ್ಣ ನೋಡಿ ಪ್ರೇಮಿಸಲಾದೀತೆ? 'ಮದುವೆ ಸ್ವರ್ಗದಲ್ಲಿ ನಿಶ್ಚಯ ಆಗಿರುತ್ತದೆ' ಎನ್ನುವ ಮಾತಿನಲ್ಲಿ ಸೆರೆನಾಗೂ ನಂಬಿಕೆ ಇದೆಯಂತೆ.

ಇತ್ತೀಚೆಗೆ ಪತ್ರಿಕಾಗೋಷ್ಠಿಯೊಂದರಲ್ಲಿ ಸೆರೆನಾ ಹೇಳಿದ ಒಂದು ಮಾತು ಮಾತ್ರ ಗಮನಾರ್ಹ: 'ನಾನು ಗಂಡಸಾಗಿದ್ದರೆ ಇಷ್ಟು ಹೊತ್ತಿಗೆ ನನ್ನನ್ನು ತಲೆಯಲ್ಲಿ ಹೊತ್ತು ಮೆರೆಸುತ್ತಿದ್ದರು. ಹೆಣ್ಣು ಎಷ್ಟೇ ದೊಡ್ಡ ಸಾಧನೆ ಮಾಡಿದರೂ ಅಷ್ಟೆ...!' ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR. Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65